ರಾಜ್ಯದಲ್ಲಿರುವ ಹೆಚ್ಚುವರಿ ಭೂಮಿ ಹಾಗೂ ಬಗರ್‌ಹುಕುಂ ಭೂಮಿಯನ್ನು ಸಾಗುವಳಿ ಮಾಡುವವರಿಗೆ ಪಟ್ಟಾ ಒದಗಿಸುವ ಬಗ್ಗೆ.

೧೯೮೨ ಶ್ರೀ ಪಂಪಾಪತಿ (ದಾವಗೆರೆ).—ಮಾನ್ಯ ಕಂದಾಯ, ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಹೆಚ್ಚುವರಿ ಭೂಮಿ ಎಷ್ಟು.

ಆ) ರಾಜ್ಯದಲ್ಲಿರುವ ಬಗರ್‌ಹುಕುಂ ಸಾಗುವಳಿ ಭೂಮಿ ಎಷ್ಟು, ಸಾಗುವಳಿ ಮಾಡುತ್ತಿರುವ ಜನರ ಸಂಖ್ಯೆ ಎಷ್ಟು, (ಜಿಲ್ಲೆ ಹಾಗೂ ತಾಲ್ಲೂಕುವಾರು ವಿವರ ನೀಡುವುದು)

ಇ) ರಾಜ್ಯದ ಹೆಚ್ಚುವರಿ ಭೂಮಿಯನ್ನು ಇಲ್ಲಿಯವರೆಗೆ ಸಾಗುವಳಿ ಮಾಡಲು ಹಂಚಿರುವ ಜನರ ಸಂಖ್ಯೆ ಎಷ್ಟು.

ಈ) ರಾಜ್ಯದ ಬಗರ್‌ಹುಕುಂ ಭೂಮಿಯನ್ನು ಸಾಗುವಳಿ ಮಾಡುವವರಿಗೆ ಪಟ್ಟಾ ಒದಗಿಸಿರುವ ಜನರ ಸಂಖ್ಯೆ ಎಷ್ಟು (ವಿವರ ನೀಡುವುದು)

ಉ) ಸಾಗುವಳಿದಾರರಿಗೆ ಪಟ್ಟಾ ಕೊಡದಿದ್ದರೆ ಯಾವಾಗ ಕೊಡಲಾಗುವುದು.

ಊ) ಬಗರ್‌ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ಸರ್ಕಾರವು ಕೈಗೊಂಡಿದೆಯೆ (ವಿವರವಾದ ಮಾಹಿತಿಯನ್ನು ಒದಗಿಸುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು).—

ಅ) ೧೨,೨೬೭ ಎಕರೆಗಳು.

ಆ) ೬,೭೬,೪೩೨ ಎಕರೆ ೨೬ ಗುಂಟೆ.

೩,೬೪,೧೪೫ ಜನರು (ವಿವರಗಳು ಅನುಬಂಧ ೨ ರಲ್ಲಿ).

ಇ) ೨೫,೨೧೮ ಜನರು (೮೩–೮೪ರಿಂದ ೮೭–೮೮ ರ ವರೆಗೆ).

ಈ) ೧,೯೭,೫೨೧ ಜನರು (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ. ಅನುಬಂಧ-II).

ಉ) ಭೂ ಕಂದಾಯ ಅಧಿನಿಯಮದ ೧೯೬೪ರ ಕರಡು ಶಿದ್ದುಪಡಿ ಮಸೂದೆಯು ಸದನದ ಮುಂದೆ ಇದ್ದು ಅದು ಜಾರಿಯಾದ ನಂತರ ನಿಯಮಾನುಸಾರ ಸಕ್ರಮಗೊಳಿಸಿ ಅರ್ಹ ಜನರಿಗೆ ಪಟ್ಟಾ ಕೊಡಲಾಗುವುದು.

ಊ) ಸದರಿ ಮಸೂದೆಯು ಜಾರಿಯಾಗುವವರೆಗೆ, ದಿನಾಂಕ ೧–೭–೧೯೮೪ಕ್ಕೆ ಮುಂಚಿತವಾಗಿ ಅನಧಿಕೃತ ಸಾಗುವಳಿ ಮಾಡುತ್ತಿದ್ದವರನ್ನು ಒಕ್ಕಲೆಬ್ಬಿಸಬಾರದೆಂದು ಎಲ್ಲಾ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ಕ್ರ.ಸಂ. ಆರ್‌ಡಿ ೧೫೯ ಎಲ್‌ಜಿಪಿ ೮೭ ದಿನಾಂಕ ೨೮–೧೨–೧೯೮೭ರ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಅನುಬಂಧ—೧

ಕ್ರಮ ಸಂಖ್ಯೆ	ಜಿಲ್ಲೆ/ತಾಲ್ಲೂಕು	೩	೪	೫
೧	೨			
	೧. ಹಾಸನ ಜಿಲ್ಲೆ	ಎ.	ಗುಂ.	
೧	ಆಲೂರು	೯,೬೨೯	೮೩	೪,೮೭೪
೨	ಅರಕಲಗೂಡು	೬,೫೦೪	೦೨	೩,೮೧೫
೩	ಅರಸೀಕೆರೆ	೧೯,೯೮೮	೦೧	೮,೮೨೭
೪	ಬೇಲೂರು	೧೧,೮೩೪	೦೬	೬,೩೭೪
೫	ಚೆನ್ನರಾಯಪಟ್ಟಣ	೧೧,೭೯೭	೩೪	೭,೫೪೦
೬	ಹೊಳೆನರಸೀಪುರ	೫,೧೪೩	೩೫	೨,೧೫೨
೭	ಹಾಸನ	೧೨,೦೪೮	೩೨	೮,೦೬೬
೮	ಸಕಲೇಶಪುರ	೫,೦೨೫	೧೭	೧,೯೦೧
	ಒಟ್ಟು	೮೧,೯೭೧	೧೦	೪೩,೪೯
	೨. ಶಿವಮೊಗ್ಗ ಜಿಲ್ಲೆ			
೧	ಶಿವಮೊಗ್ಗ	೧೦,೬೬೬	೨೪	೫,೩೧೧
೨	ಭದ್ರಾವತಿ	೯,೪೧೭	೧೦	೪,೩೬೨
೩	ಚೆನ್ನಗಿರಿ	೪,೫೦೨	೨೧	೧,೯೪೪
೪	ಹೊನ್ನಾಳಿ	೫,೨೩೦	೦೧	೨,೨೩೦
೫	ಶೀರ್ಥಹಳ್ಳಿ	೨,೩೨೫	೦೮	೧,೯೦೦
೬	ಸಾಗರ	೯,೬೭೨	೩೦	೩,೧೪೭
೭	ಶಿಕಾರಿಪುರ	೪,೦೬೬	೩೧	೨,೨೩೨
೮	ಸೊರಬ	೬,೩೯೪	೧೦	೩,೦೯೪
೯	ಹೊಸನಗರ	೫,೧೦೪	೦೫	೨,೩೫೨
	ಒಟ್ಟು	೫೨,೩೪೩	೧೪	೨೬,೨೨೦
	೩. ಕೊಡಗು ಜಿಲ್ಲೆ			
೧	ಮಂಡಿಕೇರಿ	೨,೯೪೫	೨೪	೧,೧೩೫
೨	ಸೋಮವಾರಪೇಟೆ	೨,೪೭೧	೪೩	೨,೪೦೫
೩	ವಿರಾಜಪೇಟೆ	೨,೪೯೫	೦೩	೨,೫೫೧
	ಒಟ್ಟು	೪,೭೧೧	೭೪	೬,೦೯೧

ಸಂಖ್ಯೆ	ಜಿಲ್ಲೆ : ತಾಲ್ಲೂಕುಗಳು	ಬಗರ್‌ಹುಕುಂ ಸಾಗುವಳಿ ವಿಸ್ತೀರ್ಣ		ಜನರ ಸಂಖ್ಯೆ
೧	೨	೩		೪
		ಎ.	ಗುಂ.	
೪.	ಚಿಕ್ಕಮಗಳೂರು ಜಿಲ್ಲೆ			
೧	ಚಿಕ್ಕಮಗಳೂರು	೧೭,೭೫೮	೧೫	೩೫೧೨
೨	ಮೂಡಿಗೆರೆ	೩,೯೨೮	೦೩	೨೭೦೧
೩	ಶೃಂಗೇರಿ	೭೩೬	೧೯	೨೫೪೫
೪	ಕೊಪ್ಪ	೩,೭೨೧	೨೮	೨೫೩೬
೫	ಎನ್. ಆರ್ ಪುರ	೧,೮೮೭	೨೫	೫೧೩
೬	ತರೀಕೆರೆ	೧೨,೦೧೭	೩೯	೫೦೮೩
೭	ಕಡೂರು	೧೨,೮೮೩	೦೦	೫೩೮೯
	ಒಟ್ಟು	೫೮,೫೪೯	೧೪	೨೬೨೭
೫.	ಚಿತ್ರದುರ್ಗ ಜಿಲ್ಲೆ			
೧	ಚಿತ್ರದುರ್ಗ	೫,೬೦೦	೦೫	೩೦೭೬
೨	ಚಳ್ಳಕೆರೆ	೧೫,೧೪೦	೨೨	೪೭೦೧
೩	ಹಿರಿಯೂರು	೨,೮೯೯	೦೫	೧೩೮೫
೪	ಮೊಳಕಾಲ್ಮೂರು	೧,೧೪೭	೦೭	೨೯೯
೫	ದಾವಣಗೆರೆ	೩,೨೮೭	೩೮	೨೨೦೨
೬	ಹರಿಹರ	೧೧೭	೨೬	೫೯
೭	ಹೊಳಲ್ಕೆರೆ	೯,೪೮೭	೦೦	೫೧೦೫
೮	ಹೊಸದುರ್ಗ	೧,೨೬೦	೧೮	೬೨೭
೯	ಜಗಳೂರು	೪೯,೩೨೬	೨೧	೨೨೯೧೭
	ಒಟ್ಟು	೪೯,೩೨೬	೨೧	೨೨೯೧೭
೬.	ಬೆಂಗಳೂರು (ನಗರ)			
೧	ಬೆಂಗಳೂರು (ದಕ್ಷಿಣ)	೨,೫೪೦	೦೫	೪೦೬೫
೨	ಬೆಂಗಳೂರು ಉತ್ತರ	೩,೨೬೭	೧೫	೩೬೨೧
೩	ಆನೇಕಲ್	೩,೦೦೪	೦೭	೧೦೨೫
	ಒಟ್ಟು	೭,೮೧೧	೨೭	೯೨೧೧

೧	೨	೩	೪	೫
೭.	ಬೆಂಗಳೂರು (ಗ್ರಾಮಾಂತರ)			
೧	ದೇವನಹಳ್ಳಿ	೫೧೧೮	೨೦	೩೩೯
೨	ರಾಮನಗರ	೨೪೬೫	೩೦	೧೯೪೯
೩	ಚನ್ನಪಟ್ಟಣ	೫೭೫೭	೨೪	೪೦೯೫
೪	ಹೊಸಕೋಟೆ	೩೦೧೦	೦೭	೧೪೬೪
೫	ಕನಕಪುರ	೧೨೬೭೩	೨೬	೫೩೧೯
೬	ಮಾಗಡಿ	೧೧೪೧೭	೧೩	೮೬೮೪
೭	ನೆಲಮಂಗಲ	೩೪೩೦	೧೦	೩೫೦೦
೮	ದೊಡ್ಡಬಳ್ಳಾಪುರ	೨೮೬	೨೯	೩೧೭
	ಒಟ್ಟು	೪೪೧೫೯	೩೯	೨೮೩೭೭
೮.	ಬೆಳಗಾಂ ಜಿಲ್ಲೆ			
೧	ಬೆಳಗಾಂ	೫೮	೩೦	೬೯
೨	ಖಾನಾಪುರ	೭೯	೦೩	೨೨
೩	ಹುಕ್ಕೇರಿ	೧೨೧	೦೧	೧೫೮
೪	ಬೈಲಹೊಂಗಲ್	೬೭	೧೧	೪೩
೫	ಸೌಂದತ್ತಿ	೭೫೩	೧೨	೯೦೬
೬	ರಾಮದುರ್ಗ	—	—	—
೭	ಗೋಕಾಕ್	—	—	—
೮	ಚಿಕ್ಕೋಡಿ	೩೮	೨೬	೭೧
೯	ರಾಯಬಾಗ್	೨೭	೨೨	೧೫೯
೧೦	ಅಥಣಿ	೪೫	೨೫	೪೮೩
	ಒಟ್ಟು	೧೧೯೨	೩೧	೧೯೩೨
೯,	ಕೋಲಾರ ಜಿಲ್ಲೆ			
೧	ಕೋಲಾರ	೪೨೬೮	೧೪	೩೦೦೭
೨	ಮಾಲೂರು	೫೮೮೫	೦೩	೩೪೭೬
೩	ಬಂಗಾರಪೇಟೆ	೭೭೦೪	೦೦	೬೧೩೨
೪	ಮುಳಬಾಗಿಲು	೧೨೨೨೮	೧೮	೫೭೨೭
೫	ಶ್ರೀನಿವಾಸಪುರ	೬೯೮೭	೩೦	೬೯೮೦
೬	ಚಿಕ್ಕಬಳ್ಳಾಪುರ	೪೮೩೭	೦೪	೨೫೫೦
೭	ಚಿಂತಾಮಣಿ	೮೯೯೧	೦೯	೫೧೦೧
೮	ಗೌರಿಬಿದನೂರು	೮೫೭೬	೩೭	೪೪೯೩
೯	ಬಾಗೇಪಲ್ಲಿ	೩೮೫೨	೧೦	೧೭೬೦
೧೦	ಶಿಡ್ಲಘಟ್ಟ	೪೫೦೭	೦೨	೪೪೬೨
೧೧	ಗುಡಿಬಂಡಿ	೧೩೪೯	೧೭	೭೧೯
	ಒಟ್ಟು	೭೨೮೮೭	೨೦	೪೧೪೦೭

೧	೨	೩	೪	೫
೧೦.	ಗುಲ್ಬರ್ಗಾ ಜಿಲ್ಲೆ			
೧	ಗುಲ್ಬರ್ಗಾ	೨೯೯೬	೦೫	೮೯೧
೨	ಆಫ್‌ಜಲ್‌ಪುರ	೧೨೫೬	೩೩	೪೧೮
೩	ಆಲಂದ್	೨೮೨೩	೩೦	೯೭೦
೪	ಯಾದ್‌ಗಿರ್	೩೩೭೧	೨೮	೧೧೨೧
೫	ಜೇವರ್ಗಿ	೪೦೨೩	೧೦	೧೪೪೨
೬	ತಪಪುರ	೨೫೫೪	೧೦	೭೪೮
೭	ಶೋರಾಪುರ	೭೪೨	೧೧	೨೩೮
೮	ಸೇಡಂ	೧೦೩೨	೧೬	೪೩೨
೯	ಚಿಂಚೋಳಿ	೧೮೦೨೫	೨೦	೫೪೮೫
೧೦	ಚಿತ್ತಾಪುರ	೨೦೮೯	೨೧	೫೧೩
	ಒಟ್ಟು	೩೮೩೫೫	೨೪	೧೨೨೫೮
೧೧.	ಮಂಡ್ಯ ಜಿಲ್ಲೆ			
೧	ಮಂಡ್ಯ	೧೪೯೪	೨೧	೧೮೮೦
೨	ಮದ್ದೂರು	೧೪೧೯	೩೦	೧೮೨೬
೩	ಮಳವಳ್ಳಿ	೩೦೩೧	೨೫	೨೨೬೨
೪	ಪಾಂಡವಪುರ	೨೪೩೮	೨೦	೨೨೧೩
೫	ಶ್ರೀರಂಗಪಟ್ಟಣ	೨೯೯೦	೩೯	೧೯೧೧
೬	ಕೆ. ಆರ್. ಪೇಟೆ	೪೧೮೮	೩೬	೨೦೪೨
೭	ನಾಗಮಂಗಲ	೩೦೭೪	೦೩	೧೯೩೮
	ಒಟ್ಟು	೧೮೫೬೬	೧೪	೧೫೦೩೧
೧೨.	ಮೈಸೂರು ಜಿಲ್ಲೆ			
೧	ಮೈಸೂರು	೦	೦	೦೦
೨	ಟಿ. ನರಸೀಪುರ	೪೪೩	೩೦	೫೨೦
೩	ಕೊಳ್ಳೇಗಾಲ	೩೯೬೯	೨೯	೧೯೧೪
೪	ನಂಜನಗೂಡು	೨೪೭೩	೧೪	೧೩೯೬
೫	ಗುಂಡ್ಲುಪೇಟೆ	೫೪೪೪	೨೯	೨೪೫೫
೬	ಚಾಮರಾಜನಗರ	೯೦೫೧	೧೧	೩೫೫೧
೭	ಯಳಂದೂರು	೦	೦	೦೦
೮	ಹುಣಸೂರು	೧೪೭೭	೭	೯೧೧
೯	ಕೆ. ಆರ್. ನಗರ	೨೧೨೪	೩೩	೧೨೯೦
೧೦	ಹೆಚ್. ಡಿ. ಕೋಟೆ	೧೧೦೭೨	೨೨	೪೨೧೨
೧೧	ಪಿರಿಯಾಪಟ್ಟಣ	೪೦೫೦	೩೨	೧೬೨೫
	ಒಟ್ಟು	೪೨೨೧೬	೧೦	೧೪೩೪೪

೧	೨	೩	೪	೫
೧೩.	ಬಿಜಾಪುರ ಜಿಲ್ಲೆ			
೧	ಬಿಜಾಪುರ	೪೫೨	೨೩	೧೬೦
೨	ಬಸವನಬಾಗೇವಾಡಿ	೭೧	೧೨	೧೦
೩	ಮುದ್ದೇಬಿಹಾಳ	೩೯	೩೭	೩೦
೪	ಬಾಗಲಕೋಟೆ	—	—	—
೫	ಬಾದಾಮಿ	೦೦	೦೩	೧೨
೬	ಹುನಗುಂದ	—	—	—
೭	ಜಮಖಂಡಿ	೦	೦೩	೧೨
೮	ಮುಧೋಳ	೧೦	೦೮	೨೭೩
೯	ಬೀಳಗಿ	—	—	—
೧೦	ಇಂಡಿ	೮೫	೫೦	೧೬
೧೧	ಸಿಂದಗಿ	೪೨೨	೨೦	೧೧೪
	ಒಟ್ಟು	೧೦೬೭	೧೪	೬೨೭
೧೪.	ಬೀದರ್ ಜಿಲ್ಲೆ			
೧	ಬೀದರ್	೧೨೬೮	೨೩	೫೧೮
೨	ಭಾಲ್ಕಿ	೧೭೭	೦೩	೯೮
೩	ಹುಮನಾಬಾದ್	೧೭೧೩	೦೩	೮೩೨
೪	ಔರಾದ್	೩೫೯	೦೩	೧೦೩
೫	ಬಸವಕಲ್ಯಾಣ್	೪೮೯೨	೨೪	೧೪೨೯
	ಒಟ್ಟು	೯೪೨೯	೩೬	೨೯೮೦
೧೫.	ರಾಯಚೂರು ಜಿಲ್ಲೆ			
೧	ರಾಯಚೂರು	—	—	—
೨	ಮಾನ್ವಿ	—	—	—
೩	ದೇವದುರ್ಗ	—	—	—
೪	ಲಿಂಗಸುಗೂರು	೨೮೮೧	೩೯	೭೦೨
೫	ಸಿಂಧನೂರು	೨೮	೦೦	೭೭
೬	ಕಷ್ಟಗಿ	೩೭೬	೦೭	೧೦೭
೭	ಕೊಪ್ಪಳ್	—	—	—
೮	ಗಂಗಾವತಿ	೨೭೦೦	೨೧	೧೩೬೩
೯	ಯಲಬುರ್ಗ	೩೩	೦೦	೪೯೧
	ಒಟ್ಟು	೬೦೧೯	೨೭	೨೭೪೦

೧	೨		೩	೪	೫
೧೬.	**ಬಳ್ಳಾರಿ ಜಿಲ್ಲೆ**				
೧	ಬಳ್ಳಾರಿ		೨೯೫೯	೪೯	೧೭೮೦
೨	ಸಂಡೂರು		೫೯೩೭	೯೪	೨೧೧೮
೩	ಸಿರಿಗುಪ್ಪ		೭೪೭೬	**೬೮**	೨೩೮೩
೪	ಹಡಗಲಿ		೧೦೦೬	೭೪	೩೮೧
೫	**ಹೆಚ್. ಬಿ. ಹಳ್ಳಿ**		೩೩೧೧	೩೫	೧೪೩೫
೬	ಹರಪನಹಳ್ಳಿ		೭೪೦೮	೫೩	೭೮೧೭
೭	**ಹೊಸಪೇಟೆ**		೪೭೨೫	೭೦	೩೧೪೩
೮	ಕೂಡ್ಲಿಗಿ		೯೬೦೪	**೭೯**	೩೩೪೭
		ಒಟ್ಟು	೩೭೪೨೨	೨೨	೧೭೪೦೪
೧೭.	**ಧಾರವಾಡ ಜಿಲ್ಲೆ**				
೧	**ಧಾರವಾಡ**		೪೧೨	೩೯	೨೧೨
೨	**ಹುಬ್ಬಳ್ಳಿ**		೩೩೧	೧೨	೩೭
೩	ಕಲಘಟಗಿ		೪೧೧	೦೫	೧೩೨
೪	ನವಲಗುಂದ		೪	೦೫	೧೮೩
೫	ಗದಗ		೪೯೪	**೩೬**	೧೪೯
೬	ರೋಣ		೧೬೭೩	೨೦	೪೩೫
೭	ಮುಂಡರಗಿ		೩೧	೧೬	೯
೮	ನರಗುಂದ		೬೪	೩೫	೨೧
೯	ಹಾವೇರಿ		೧೬೪೦	೧೨	೭೧೧
೧೦	ರಾಣೆಬೆನ್ನೂರು		೯೬೨	೦೯	೨೫೭
೧೧	**ಬ್ಯಾಡಗಿ**		೫೬೯	೦೨	೧೫೯
೧೨	ಹಿರೇಕೆರೂರು		೯೯೫	೨೩	೨೪೩
೧೩	ಸವಣೂರು		೩೩೪	೧೯	೧೯೫
೧೪	**ಶಿಗ್ಗಾಂವ**		೨೬೯	೩೫	೯೧
೧೫	ಕುಂದಗೋಳ		೨೦	೦೪	೫೬
೧೬	ಶಿರಹಟ್ಟಿ		೯	೦೦	೫
೧೭	ಹಾನಗಲ್		೧೪೧೪	೩೩	೧೩೦೦
		ಒಟ್ಟು	೮೫೪೫	೧೧	೪೨೧೭

೧	೨		೩	೪	೫
೧೮.	ತುಮಂಕೂರು ಜಿಲ್ಲೆ				
೧	ತುಮಕೂರು		೭೬೮೮೨	೨೨	೧೪೭೩
೨	ಗುಬ್ಬಿ		೧೪೨೧೫	೩೫	೬೭೪೨
೩	ಕುಣಿಗಲ್		೫೦೦೨	೦೯	೩೫೮೬
೪	ತಿಪಟೂರು		೧೮೬೩೯	೧೬	೬೪೯೧
೫	ಸಿ. ಎನ್. ಹಳ್ಳಿ		೧೨೬೯೦	೦೦	೬೬೮೫
೬	ತರುವೇಕೆರೆ		೬೨೦೭	೧೦	೩೭೯೯
೭	ಮಧುಗಿರಿ		೧೪೦೩೮	೨೧	೫೪೦೨
೮	ಕೊರಟಗೆರೆ		೩೩೫೬	೫೬	೧೫೮೦
೯	ಶಿರ		೫೩೦೯	೧೦	೬೫೩೩
೧೦	ಪಾವಗಡ		೪೩೨೪	೩೭	೨೪೨೯
		ಒಟ್ಟು	೪೪೧೭೫	೨೬	೪೪೬೭೦
೧೯.	ಕಾರವಾರ ಜಿಲ್ಲೆ				
೧	ಕಾರವಾರ		೯೪	೨೭	೮೬
೨	ಆಂಕೋಲ		೫೨೭	೨೦	೩೫೮
೩	ಕುಂಟ		೧೨	೩೩	೭೦
೪	ಹೊನ್ನಾವರ		೨೨೩೧	೦೧	೨೦೩೨
೫	ಭಟ್ಕಳ		೧೩೪	೧೬	೨೭೬
೬	ಸಿದ್ದಾಪುರ		೧೯೪೧	೦೨	೪೧೪
೭	ಸಿರಸಿ		೨೩೫೬	೨೯	೧೪೪೫
೮	ಮುಂದಗೋಡು		೪೧೪೨	೧೧	೨೦೦೮
೯	ಯಲ್ಲಾಪುರ		೨೩೩೨	೦೪	೧೦೪೦
೧೦	ಹಳಿಯಾಳ		೧೫೯೬	೦೬	೫೩೪
೧೧	ಸೂಪ		೬೪೪	೦೬	೩೧೪
		ಒಟ್ಟು	೨೦೦೧೭	೧೨	೯೪೫೩
೨೦.	ದಕ್ಷಿಣ ಕನ್ನಡ ಜಿಲ್ಲೆ				
೧	ಬೆಳ್ತಂಗಡಿ		೧೦೨೭೫	೨೩	೫೯೪೫
೨	ಪುತ್ತೂರು		೪೪೪೫	೩೫	೫೪೪೩
೩	ಸೂಳ್ಯ		೪೨೧೪	೦೦	೨೬೦೪
೪	ಉಡುಪಿ		೧೩೯೭	೦೦	೨೯೪೫
೫	ಕಾರ್ಕಳ		೨೪೨೫	೧೩	೩೫೯೩
೬	ಕುಂದಾಪುರ		೩೧೬೧	೫೫	೨೧೩೩
೭	ಮಂಗಳೂರು		೧೪೪೫	೯೯	೧೬೦೫
೮	ಬಂಟ್ವಾಳ		೩೪೩೨	೭೧	೫೧೯೪
			೩೫೬೪೦	೯೬	೨೯೪೪೬

ಅನುಬಂಧ—೨

ಬೆಂಗಳೂರು ವಿಭಾಗ				
೧	ಬೆಂಗಳೂರು (ಗ್ರಾಮಾಂತರ)		...	೪,೭೩೦
೨	ಬೆಂಗಳೂರು (ನಗರ)		...	೨೪,೬೬೩
೩	ಶಿವಮೊಗ್ಗ		...	೧೦,೬೧೩
೪	ಚಿತ್ರದುರ್ಗ		...	೪,೭೭೧
೫	ತುಮಕೂರು		...	೧೯,೯೮೮
೬	ಕೋಲಾರ		...	೨೮,೩೦೭
		ಒಟ್ಟು	...	೯೪,೦೭೮
ಮೈಸೂರು ವಿಭಾಗ				
೭	ಮೈಸೂರು		...	೨೦,೦೫೯
೮	ಮಂಡ್ಯ		...	೯,೭೭೩
೯	ಹಾಸನ		...	೨೦,೯೬೦
೧೦	ಚಿಕ್ಕಮಗಳೂರು		...	೧೪,೬೫೩
೧೧	ಕೊಡಗು		...	೪,೩೬೬
೧೨	ದಂಗಳೂರು		...	೩,೦೧೩
		ಒಟ್ಟು	...	೭೨,೮೨೪
ಬೆಳಗಾಮ್ ವಿಭಾಗ				
೧೩	ಬೆಳಗಾಮ್		...	೫೭೧
೧೪	ಕಾರವಾರ		...	೧೨೩
೧೫	ಬಿಜಾಪುರ		...	೪೮೨
೧೬	ಧಾರವಾಡ		...	೨,೧೭೯
		ಒಟ್ಟು	...	೩,೩೫೫
ಗುಲ್ಬರ್ಗಾ ವಿಭಾಗ				
೧೭	ಗುಲ್ಬರ್ಗಾ		...	೬,೭೪೬
೧೮	ಬೀದರ್		...	೫,೮೮೯
೧೯	ಬಳ್ಳಾರಿ		...	೬,೪೧೪
೨೦	ರಾಯಚೂರು		...	೮,೨೧೫
			ಮೊತ್ತ	೨೭,೨೬೪
		ಒಟ್ಟು ಮೊತ್ತ	...	೧,೯೭,೫೭೧

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಹೆಚ್ಚುವರಿ ಭೂಮಿ ಇರಬಹುದು ೧೨,೨೬೭ ಎಕರೆಗಳು ಎಂದಿದ್ದಾರೆ. ಇದನ್ನು ಭೂಹೀನ ರೈತರಿಗೆ ಇನ್ನೂ ಎಷ್ಟು ದಿವಸಗಳಲ್ಲಿ ಹಂಚುತ್ತೀರಿ ? ಇದನ್ನು ಹಂಚುವುದಕ್ಕೆ ಏನು ತೊಡಕು ಆಗಿದೆ ? ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ೬,೭೬,೪೩೨ ಎಕರೆ ೨೬ ಗುಂಟೆ ಈ ಬಗರ್ ಹುಕುಮ್...

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕೋರಮ್ ಇಲ್ಲದೇ ಸಭೆ ನಿಮಗೂ ಸರಿಯಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಡಳಿತ ಪಕ್ಷದ ಕಡೆ ಮಂತ್ರಿಗಳನ್ನು ಬಿಟ್ಟರೆ ಒಬ್ಬರೂ ಸದಸ್ಯರು ಸಭೆಯಲ್ಲಿಲ್ಲ.

(ಗೊಂದಲ)

ಅಧ್ಯಕ್ಷರು.—ಪಾಟೀಲರೇ, ಕೋರಂ ಇಲ್ಲ ಎಂದರೆ ಹೇಗೆ, ಕೋರಂ ಸಂಖ್ಯೆ ಎಂಬುದು ನಿಮಗೆ ಗೊತ್ತೇ ? ಹಾಗೆ ನೀವು ಹೇಳುವುದು ಸರಿಯಲ್ಲ. ಕೋರಂಗೆ ಎಷ್ಟು ಮಂದಿ ಬೇಕು ?

ಶ್ರೀ ಎಂ. ಎಸ್. ಪಾಟೀಲ್.—ನನಗೆ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ಗೊತ್ತಿಲ್ಲದಿದ್ದರೆ ಕುಳಿತುಬಿಡಿ. ಸುಮ್ಮನೆ ಏಕೆ ಹೀಗೆ ಹೇಳುತೀರಿ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ ಸಭೆಯಲ್ಲಿ ಕೋರಂ...

(ಗೊಂದಲ)

ಅಧ್ಯಕ್ಷರು.—ಸುಮ್ಮನೆ ತಾವು ಏಕೆ ಈ ರೀತಿ ಮಾಡುತ್ತೀರಿ? ಸಭೆಯಲ್ಲಿ ಕೋರಂ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬಬ್ಬರೂ ಸದಸ್ಯರು ಬಿಟ್ಟರೆ ಆ ಕಡೆ ಬರೀ ಮಂತ್ರಿಗಳು ಇದ್ದಾರೆ ? ೨೪ ಜನ ಮಂತ್ರಿಗಳೇ ಇದ್ದರೂ ಕೋರಂ ಆಗುತ್ತದೆ.ಕೋರಂ ಇದೆಯೆಂದು ಮಂತ್ರಿಗಳೇ ಸಭೆ ನಡೆಸಿದರೆ ಆಗುತ್ತದೆಯೇ ?

(ಗೊಂದಲ)

ಅಧ್ಯಕ್ಷರು.—ಕೋರಂ ಎಷ್ಟು ಇರಬೇಕೆಂದು ಅವರಿಗೆ ಗೊತ್ತಿಲ್ಲ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಭೆಯಲ್ಲಿ ಕೋರಂ ಬಗ್ಗೆ...

ಅಧ್ಯಕ್ಷರು.—ಸಭೆಯಲ್ಲಿ ಕೋರಂ ಇದೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಪ್ರಶ್ನೋತ್ತರ ವೇಳೆಯಲ್ಲಿ ಪ್ರಾಯಶಃ ಮಂತ್ರಿಗಳು ಹಾಜರಿರಬೇಕು.

ಅಧ್ಯಕ್ಷರು.—ಕೋರಂ ಇಲ್ಲ ಎಂದರೆ ಹೇಗೆ ? ಕೋರಂ ಇದೆ.

ಶ್ರೀ ಆರ್. ಎನ್. ನಾಯಂಕ್.—ಈಗ ಕೋರಂ ಆಗಿದೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ತಮಗೆ ಗೌರವ ಕೊಡದಿದ್ದರೆ ಹೇಗೆ ? ನಾನು ವಿಷಯ ಎತ್ತಿದಾಗ ಕೋರಂ ಇರಲಿಲ್ಲ. ಜವಾಬ್ದಾರಿಯಿಂದ ಮಾತನಾಡಬೇಕೆಂದು ತಾವು ಶಿಕ್ಷಿಸಿದ್ದೀರಿ. ಜವಾಬ್ದಾರಿ ಇಲ್ಲದೆ ನಾನು ಮಾತನಾಡಿಲ್ಲ. ಅದನ್ನು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇಲ್ಲ ಅಂದರೆ ಒಪ್ಪುತ್ತೇನೆ. ಕೋರಂ ಇಲ್ಲ ಅಂದರೆ ಹೇಗೆ ?

ಶ್ರೀ ಆರ್. ವೆಂಕಟರಾವಪ್ಪ.—ತಾವು ಎಲ್ಲಾ ಸದಸ್ಯರಿಗೆ ಬುದ್ಧಿ ಹೇಳಿ ಬರುವ ಸಾಗೆ ಮಾಡಬೇಕು. ೨೨೫ ಜನಕ್ಕೆ ೨೫ ಜನ ಇಲ್ಲವೆಂದರೆ ಹೇಗೆ ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಕೋರಂ ೨೧ ಇದ್ದರೆ ಸಾಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಮಗೆ ಏಕೆ ಹೇಳುತ್ತೀರಿ, ನಿಮ್ಮವರು ನೋಡಿಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಶ್ನೆಗೆ ಉತ್ತರ ಕೊಡತಕ್ಕ ಮಂತ್ರಿಗಳು ಇಲ್ಲದೆ ಹೋದರೆ ಆಕ್ಷೇಪ ಪ್ರಶ್ನೆಗೆ ಉತ್ತರ ಕೊಡಬೇಕಾದ ಮಂತ್ರಿಗಳು ಇದ್ದಾರೆ. ನನ್ನ ಮೂರು ಪ್ರಶ್ನೆಗಳಿಗೆ ಸಮಸ್ಯೆಗಳಿಲ್ಲದೆ ಉತ್ತರಕೊಡುವುದಕ್ಕಾಗಲಿಲ್ಲ. ಈ ಕಡೆಯಿಂದ ಒಬ್ಬರು ಆಕಡೆಯಿಂದ ಇಬ್ಬರು ಸದಸ್ಯರು ಇರಲಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ತಪ್ಪು ಮಾಡಿದ್ದೇವೆ. ನಮ್ಮ ಸರ್ಕಾರ ತಪ್ಪು ಮಾಡಿದೆಯೆಂದು ಹೇಳಿ. ನಾವು ಕೇಳುವ ಪ್ರಶ್ನೆಗೆ ನಿಮ್ಮಿಂದ ಉತ್ತರ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಿಮ್ಮ ಕಡೆ ಮಾನ್ಯ ಮೂಡಲಗಿರಿಯಪ್ಪ ಇರಲಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಲ್ಲಾರಿಗೌಡ ಪಾಟೀಲರು ಸೂಚನೆ ತಂದಾಗ ೫೫ ಜನರಲ್ಲಿ ಮಾತ್ರ ಇದ್ದರು. ೧೪೦ ಜನರಲ್ಲಿ ೫೫ ಜನ ಇದ್ದರೆ ಸಾಕೆ ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೆಚ್ಚುವರಿ ಭೂಮಿಯನ್ನು ಸಾಗುವಳಿ ಮಾಡಲು ಸುಮಾರು ೩೫ ೨೧೮ ಜನರಿಗೆ ಹಂಚಲಾಗಿದೆಯೆಂದು ತಿಳಿಸಿದ್ದಾರೆ. ಆದರೆ ಎಷ್ಟು ಎಕರೆ ಭೂಮಿಯನ್ನು ಹಂಚಿದ್ದೇವೆಂಬುದನ್ನು ತಿಳಿಸಿಲ್ಲ. ಇದರ ಬಗ್ಗೆ ವಿವರಣೆ ನೀಡುವುದು. ಬಗರ್ ಹುಕುಂ ಸಾಗುವಳಿದಾರರಲ್ಲಿ ೧-೨-೮೪ರ ಮುಂಚೆ ಅನಧಿಕೃತವಾಗಿ ಸಾಗುವಳಿ ಮಾಡಿದ್ದವರನ್ನು ಒಕ್ಕಲೆಬ್ಬಿಸಬಾರದೆಂದು ೨೮-೧೨-೮೭ರಲ್ಲಿ ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಆದರೆ ಹೊಸದುರ್ಗ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ೫೦೦ ತೆಂಗಿನ ಗಿಡಗಳನ್ನು ಕಡಿದುಹಾಕಿದ್ದಾರೆ. ಸುಮಾರು ೪೦ ಎಕರೆಯಲ್ಲಿರತಕ್ಕ ಬೆಳೆಯನ್ನು ನಾಶಮಾಡಿದ್ದಾರೆ. ಇದಕ್ಕೆ ಒಬ್ಬ ರಾಜಕೀಯ ಪ್ರಮುಖರ ಸಹಕಾರವೂ ಇದೆ. ಅವರ ಕಾರಿನಲ್ಲೇ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಲ್ಲಿಗೆ ಬಂದಿದ್ದಾರೆ. ಆವರು ಅಲ್ಲಿಗೆ ಬಂದ ಕೂಡಲೇ ತೆಂಗಿನ ಗಿಡವನ್ನು ಕಡಿಯುತ್ತಿದ್ದವರು ಜೈಕಾರ ಹಾಕಿ ಇವರನ್ನು ಹೆಗಲ ಮೇಲೆ ಎತ್ತಿಕೊಂಡು ಕುಣಿದಾಡಿದ್ದಾರೆ. ಸಣ್ಣಚಿಕ್ಕಪ್ಪ ಎನ್ನುವವರು ಜನತಾ ಪಕ್ಷದ ಹಿಂದಳಿದು ವರ್ಗದ ಸಂಚಾಲಕರಿದ್ದಾರೆ. ಒಂದೊಂದು ಎಕರೆ ಭೂಮಿಯನ್ನು ೧೯೮೧ರಲ್ಲಿ ಆ ಜನರಿಗೆ ಕೊಟ್ಟಿದ್ದಾರೆ. ಅವರಿಗೆ ಕೊಟ್ಟಿರತಕ್ಕ ಜಮೀನಿನಲ್ಲಿ ಸುಮಾರು ಜನ ಪಿ. ಎಲ್. ಡಿ. ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿದ್ದಾರೆ. ಮತ್ತು ಲೋಕೋಪಯೋಗಿ ಇಲಾಖೆಯಿಂದ ೧ ಲಕ್ಷ ರೂಪಾಯಿ ವೆಚ್ಚದಲ್ಲಿ coconut pickup ಕಟ್ಟಿದ್ದಾರೆ. ಭೂಸಾರ ಸಂರಕ್ಷಣಾ ಇಲಾಖೆಯವರು ಅಲ್ಲಿ ಬದುಗಳನ್ನು ಹಾಕಿದ್ದಾರೆ. ಇಷ್ಟೆಲ್ಲಾ ಹಣ ವಿರ್ಚು ಮಾಡಿ ಸರ್ಕಾರ ಆ ಬಡಪರಿಗೆ ಅನುಕೂಲ ಮಾಡಿ ಕೊಟ್ಟರೆ ಹಿಂದುಳಿದ ವರ್ಗದ ಸೆಲ್‌ನ ಸಂಚಾಲಕರು ಸುಮಾರು ಜನರನ್ನು ಕರೆದುಕೊಂಡು ಹೋಗಿ ಕೊಡಲಿ, ಕುಡಿಗೋಲಂ ಹಾರೆಗಳನ್ನು ತೆಗೆದುಕೊಂಡು ಹೋಗಿ ಗಿಡಗಳನ್ನು ಕಡಿದುಹಾಕಿ ಬೆಳೆಯನ್ನೆಲ್ಲಾ ನಾಶ ಮಾಡಿದ್ದಾರೆ. ಅಲ್ಲಿ ಬಡ ಹೆಣ್ಣುಮಕ್ಕಳು ಅವನ್ನು ಕಡಿದುಹಾಕಬೇಡಿ ಎಂದು ಕಾಲು ಹಿಡಿದುಕೊಂಡರೆ ಹೆಣ್ಣುಮಕ್ಕಳನ್ನು ಕಾಲಿನಿಂದ ಒದ್ದು ತಾಳಿಯನ್ನು ಹರಿದಿದ್ದಾರೆ. ಅಲ್ಲಿ ತೋಟ ಕಾಯುತ್ತಿದ್ದ ನಾಯಿ ಅಡ್ಡ ಬಂದರೆ ಅದನ್ನೂ ಕೂಡಾ ಕಡಿದು ಸಾಕಿದ್ದಾರೆ. ಇಷ್ಟೊಂದು ದುಷ್ಕೃತ್ಯಗಳನ್ನು ನಡೆಸಿದ್ದಾರೆ. ೧೯೮೧ರಲ್ಲಿ ಕೊಟ್ಟ ಜಮೀನಿನಲ್ಲಿ ಈ ರೀತಿ ಒಕ್ಕಲೆಬ್ಬಿಸುವುದಕ್ಕೆ ಇವರು ಯಾರು ? ಕೋರ್ಟ್ ಇಲ್ಲವೇ, ಕಾನೂನು ಇಲ್ಲವೇ ಕಾಪ್ಸಿ ಇಲ್ಲವೇ ? ಇವರು ಆ ಜಮೀನಿನಲ್ಲಿ ಯೋಗಿ ಈ ರೀತಿ ಕೃತ್ಯ ನಡೆಸಿರುವ ಜನರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇಲ್ಲವೇ ಸದನದ ಸಮಿತಿಯನ್ನು ನೇಮಕ ಮಾಡಿ ಆ ಸ್ಥಳಕ್ಕೆ ಕಳುಹಿಸಿ ನಡೆದಿರತಕ್ಕ ಕೃತ್ಯವನ್ನು ವೀಕ್ಷಣೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ರಾಮದಾಸ್,—ಇದು ನಿಜ ಇದೆ. ಇದು ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕದ್ದು. ಆಲ್ಲಿ ರೆವಿನ್ಯೂ ಅಧಿಕಾರಿಗಳು ಬಹಳ ತಪ್ಪು ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಷ್ಟು ಜನಕ್ಕೆ ಹಂಚಿದ್ದೀರೆಂದು ಕೇಳಿರುವ ಬಗ್ಗೆ ನನ್ನ ಹತ್ತಿರ ಈಗ ವಿವರ ಇಲ್ಲ, ಅದನ್ನು ನಾನು ನಿಮಗೆ ತಿಳಿಸುತ್ತೇನೆ. ಹೊಸದುರ್ಗ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ನಡೆದಿರುವ ವಿಚಾರದ ಬಗ್ಗೆ ಹೇಳಿದ್ದಾರೆ. ಸರ್ಕಾರದ ಸ್ಪಷ್ಟ ಆಜ್ಞೆ ಇದೆ. ಯಾರು ಒಳಕ್ಕಿಂತಲೂ ಮುಂಚೆ ಅತಿಕ್ರಮಣ ಮಾಡಿದ್ದಾರೆ,ಅವರಿಗೆ ಹೊರಗೆ ಹಾಕಬಾರದು, ಅಂತಹವರಿಗೆ ರಕ್ಷಣೆ ಕೊಡುವುದು ಸರ್ಕಾರಿ ಅಧಿಕಾರಿಗಳ ಕರ್ತವ್ಯ, ಆಲ್ಲಿ ತಪ್ಪು ಮಾಡಿದವರ ಹೆಸರನ್ನು ಹೇಳಿ ನಡೆದ ಪ್ರಕರಣದ ಬಗ್ಗೆ ಹೇಳಿದ್ದೀರಿ. ಆ ರೀತಿ ಆಲ್ಲಿ ನಡೆದಿದ್ದರೆ ಅದು ತಪ್ಪಾಗುತ್ತದೆ. ಆ ಭೂಮಿಯನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ ಅವರ ಪೊಸಿಷನ್‌ನಲ್ಲಿ ಆ ಜಮೀನು ಇದ್ದರೆ, ಸಾಲ ಮಾಡಿ ಬೆಳೆ ಹಾಕಿದ್ದರೆ ಅವರಿಗೆ ಸಂಪೂರ್ಣ ರಕ್ಷಣೆ ಕೊಡುವ ಕೆಲಸ ವನ್ನು ಮೊದಲು ಮಾಡುತ್ತೇನೆ. ಇದನ್ನು ತಾವು ಹೊಸದಾಗಿ ಹೇಳುತ್ತಿದ್ದೀರಿ. ಯಾರಿಗೆ ಲಂಚರಲ್ಲಿ ಆಗಿದೆ, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಪಡೆದು ವ್ಯವಸಾಯ ಮಾಡಿದ್ದಾರೆ ಅವರಿಗೆ ಒಕ್ಕಲೆ ಬ್ಬಿಸಬಾರದು ಅದು ತಪ್ಪು ಮೊದಲನೆಯದಾಗಿ ರಕ್ಷಣೆ ಕೊಡುವುದು ನಮ್ಮ ಕರ್ತವ್ಯ, ಎರಡನೆಯದಾಗಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಯಾವುದೇ ಪಕ್ಷದವರು ರಾಜಕೀಯ ಹಸ್ತಕ್ಷೇಪ ಮಾಡಿರಲಿ ಅದು ತಪ್ಪು ಆಗುತ್ತದೆ. ಸರಿಯಾದ ರೀತಿಯಲ್ಲಿ ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಪುಟ್ಟಪ್ಪಪಟಿ.—೫೦೦ ತೆಂಗಿನ ಗಿಡಗಳನ್ನು ಕಡಿದಿದ್ದಾರೆ, ಸುಮಾರು ೬೦–೭೦ ಎಕರೆ ಜಮಿನಿನಲ್ಲಿ ಎಳ್ಳು ಮಿಶ್ರಿತರ ಬೆಳೆಯನ್ನು ನಾಶ ಮಾಡಿದ್ದಾರೆ, ಈ ಲುಕ್ಸಾನನ್ನು ಸರ್ಕಾರ ತುಂಬಿ ಕೊಡುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೀತಿ ಅವರು ಬೆಳೆದ ಫಲಸನ್ನು ಅಧಿಕಾರಿಗಳಿಂ ನಾಶ ಮಾಡಿದ್ದರೆ ಪರಿಹಾರ ಕೊಡಬೇಕಾದ್ದು ಕರ್ತವ್ಯ. ಅದನ್ನು ಕೂಡಲೇ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಂಪಾಪಟಿ.—ಬೆಳೆ ನಾಶವನ್ನು ಅಧಿಕಾರಿಗಳು ಮಾಡಿಲ್ಲ. ಪಕ್ಷದ ಜನರು ಮಾಡಿದ್ದಾರೆ. ಇದಕ್ಕೆ ಅಧಿಕಾರಿಗಳು ಕಾರ್ಯಕ್ಕೆ ಕೊಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಿಗೆ ಪರಿಹಾರ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ರಾಮದಾಸ್.—ಆಲ್ಲಿ ಇದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳದೇ ಇದ್ದರೆ ಮರ್ಡರ್ ಕೂಡ ಆಗಬಹುದು. ರಶೀದ್ ಕೊಲೆ ಆದ ಹಾಗೆ ಆಲ್ಲಿಯೂ ಕೂಡ ಆಗಬಹುದು. ಈ ಜನರಿಗೆ ಪೋಲೀಸ್ ಇಲಾಖೆ ರಕ್ಷಣೆ ಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮಾನ್ಯ ಪಂಪಾಪತಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆಲ್ಲಿಯ ಶಾಸಕರು ಕೂಡಲೇ ನನ್ನನ್ನು ಏಕೆ ಕಾಂಟ್ಯಾಕ್ಟ್ ಮಾಡಲಿಲ್ಲ ?

ಶ್ರೀ ಜಿ. ರಾಮದಾಸ್.—ನಾನು ನಾಳೆ ಗಮನ ಸೆಳೆಯುವ ಸೂಚನೆಗೆ ಕೇಳುತ್ತೇನೆ ಸ್ವಾಮಿ ನಾಳೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದು, ಗಮನ ಸೆಳೆಯುವ ಸೂಚನೆಗಿಂತ ಖುದ್ದಾಗಿ ಬಂದು ನನ್ನನ್ನು ಬೆಟ್ಟಿಯಾಗಿ ಈ ವಿಚಾರದಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಸ್ವತಃ ಹೋಗಿ ಬಂದಿದ್ದಾರೆ. ಪ್ರೆಸ್‌ನಲ್ಲಿ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನೂ ನೋಡಿದ್ದೇನೆ. ನಾನು ಹೇಳುವುದು ಏನೆಂದರೆ ..

ಶ್ರೀ ಜಿ. ರಾಮದಾಸ್.—ಇಷ್ಟೆಲ್ಲ ನಡೆಯುವಾಗ ಪೋಲೀಸರು ಏನು ಮಾಡುತ್ತಿದ್ದರು ?

ಶ್ರೀ ಎಸ್. ಆರ್. ಬೊಮ್ಮಾಯಿ,—ತಮ್ಮ ಗಮನಕ್ಕೆ ಬಂದ ಕೂಡಲೇ ಇದನ್ನು ಅಸೆಂಬ್ಲಿಯಲ್ಲಿ ಪ್ರಶ್ನೆ ಕೇಳುವುದು, ಗಮನ ಸೆಳೆಯುವ ಸೂಚನೆ ಮುಖಾಂತರ ಅಲ್ಲ, ನಾನು ಹೇಳುವುದು, ದೂರವಾಣಿ

ಮುಂಖಾಂತರವಾಗಲೀ, ಅಥವಾ ನನ್ನನ್ನು ಸ್ವತಃ ಬೆಟ್ಟಿಯಾಗಿ ವಿವರಗಳನ್ನು ಕೊಟ್ಟಿದ್ದರೆ ಇಷ್ಟು ಹೊತ್ತಿಗಾಗಲೇ ನಾನು ಸೂಕ್ತ ಕ್ರಮ ತೆಗೆದುಕೊಂಡು ಬಿಟ್ಟಿರುತ್ತಿದ್ದೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಸೆಂಬ್ಲಿಯಲ್ಲೇ ಬರಬೇಕೆಂಬ ದೃಷ್ಟಿಯಿಂದ ಅಲ್ಲ. ಅದಕ್ಕೆಂತ ಮೊದಲೇ ಖಂಡ್ರಾಗಿ ನನಗೆ ಹೇಳಿದರೆ ನಾನು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಅನುಕೂಲ ವಾಗುತ್ತದೆ.

ಶ್ರೀ ಜಿ. ರಾಮದಾಸ್ —ಈ ವಿಚಾರವನ್ನು ತಾಲ್ಲೂಕ್ ಲೆವಲ್ ಅಧಿಕಾರಿಗಳಿಗೆ ತಿಳಿಸಿದ್ದೆ.

ಶ್ರೀ ಪಂಪಾಪತಿ.—ವಿವರಾದಂಥ ವರದಿ ಇದೆ. ಈ ಪತ್ರಿಕೆಯಲ್ಲಿ ಬಂದಿರುವುದನ್ನು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಿಗೆ ತಿಳಿಸಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ..

ಅಧ್ಯಕ್ಷರು.—ಅವರು ಹೇಳಿದ್ದಾರೆ. ನೀವೂ ಏಕೆ ಕೇಳಿಲ್ಲ ಎಂದು ಆಗುವಾರದು ಎಂದು ಏನು?

ಶ್ರೀ ಆರ್. ವೆಂಕಟರಾಮಯ್ಯ.—೩ ಲಕ್ಷ ೬೪ ಸಾವಿರ ೧೪೫ ಬಗರ್‌ಹುಕುಂ ಸಾಗುವಳಿ ಮಾಡುವರು ಇದ್ದಾರೆ. ಎಕರೆಯನ್ನು ಕೂಡ ಕೊಟ್ಟಿದ್ದೀರಿ. 'ಇ' ಉತ್ತರದಲ್ಲಿ ಹೇಳುತ್ತೀರಿ '೧ ಲಕ್ಷ ೯೭ ಸಾವಿರದ ೫೨೧ ಜನರನ್ನು ನಾವು ಬಗರ್ ಹುಕುಂ ಸಾಗುವಳಿ ಮಾಡುವುದಕ್ಕೆ ಎವಿಕ್ಟ್ ಮಾಡಿದೆವೆ' ಎಂದು. ದಯವಿಟ್ಟು ಇವನ್ನು ನಿಲ್ಲಿಸಿ. ಎರಡನೆಯದ್ದು ಸಿ ಆಂಡ್ ಡಿ ಕ್ಲಾಸ್ ಲ್ಯಾಂಡ್ ಎಂದು ಹೇಳಿ ಏನು ಕೊಟ್ಟಿದ್ದೀರಿ...

ಶ್ರೀ ಎಸ್. ಆರ್. ಬೊಮ್ಮಾಯಿ —ಮೊನ್ನೆ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಇನ್ನೂ ಪ್ರಶ್ನೆ ಕೇಳುತ್ತಿದ್ದೀರಿ ?

ಶ್ರೀ ಆರ್. ವೆಂಕಟರಾಮಯ್ಯ.—ದಯವಿಟ್ಟು ಇಷ್ಟು ಮಾತ್ರ ಹೇಳಿ ಸಿ ಆಂಡ್ ಡಿ ಕ್ಲಾಸ್ ಲ್ಯಾಂಡನ್ನು ಸೋಶಿಯಲ್ ಫಾರೆಸ್ಟ್ರೀಯವರು ಈ ಜಮೀನಾನ್ನು ಅಶಿಕ್ರಮಣ ಪ್ರವೇಶ ಮಾಡು ತ್ತಿದ್ದಾರೆ, ದಯವಿಟ್ಟು ಇದನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಇನ್ನು ಎಷ್ಟು ಕೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ, —ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ,

ಶ್ರೀ ಆರ್. ವೆಂಕಟರಾಮಯ್ಯ.— ಸ್ವಾಮಿ, ಕಾನೂನನ್ನು ಯಾವಾಗ ತರುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ,—ನಾನು ಹೇಳಿದ್ದೇನೆ. ಪುನಃ ಕೇಳುತ್ತಿದ್ದೀರಿ. ಅದು ಈ ಮನೆಯ ಮುಂದಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಯಾವಾಗ ತರುತ್ತೀರಿ ?

SRI S.R. BOMMAI—I have already introduced it in the House It is for the House to take it up. ಈ ಅಧಿವೇಶನದಲ್ಲೇ ತರಬೇಕೆಂದು ಇದ್ದೇವೆ. ಪುನಃ ಕೇಳುತ್ತಿದ್ದೀರಿ ? ಈಗಾಗಲೇ ನಾನು ಹೇಳಿದ್ದೇನೆ.

ಅಧ್ಯಕ್ಷರು.—ಇವರು ಸಭೆಯಲ್ಲೇ ಇರುವುದಿಲ್ಲ. ಅಮೇಲೆ ಇಲ್ಲಿಗೆ ಬಂದು ಹೀಗೆ ಮಾತನಾಡು ತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾಂಟ್ರವರ್ಶಿಯಲ್ ಏನು ಇದೆ ಎಂದರೆ ದಲಿತ ಸಂಘರ್ಷ ಸಮಿತಿಯವರು ಅವರು ಒಂದು ಹೇಳುತ್ತಾರೆ. ಇವರ ಪಾರ್ಟಿಯಲ್ಲಿ ಕೂಡ ಭಿನ್ನಾಭಿಪ್ರಾಯ ಇದೆ. ನಮ್ಮಲ್ಲಿಯೂ ಕೆಲವು ಸರ್ವೇಷನ್ನು ಇವೆ.

ಶ್ರೀ ಆರ್. ವೆಂಕಟರಾಮಯ್ಯ.—ಐದು ವರ್ಷ ಬೇಕೇನು ಇದಕ್ಕೆ ?

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಮಂತ್ರಿಗಳು ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಈ ಸರ್‌ಪ್ಲಸ್ ಲಾಂಡನ್ನು ಐಡೆಂಟಿಫೈ ಮಾಡಿದ್ದು ಯಾವ ತಾರೀಖಿಗೆ ? ಇದು ಬಹಳ ಮುಖ್ಯವಾದದ್ದು. ಏಕೆಂದರೆ ಸರ್ಕಾರದ ಪ್ರಕಾರ ಹೆಚ್ಚುವರಿ ಭೂಮಿ ಇಲ್ಲವೆಂದು ಹೇಳು

ತ್ತಾರೆ. ಇದರಲ್ಲಿ ಸತ್ಯಾಂಶ ಇಲ್ಲವೆಂದು ನಮಗೆ ಅನ್ನಿಸುತ್ತದೆ. ಯಾವ ತಾರೀಖಿನಿಂದ ಇದನ್ನು ಐಡೆಂಟಿಫೈ ಮಾಡಿದ್ದೀರಿ ? ಹೆಚ್ಚುವರಿ ಭೂಮಿ ಇದೆಯೆಂದು ಕಂಡು ಹಿಡಿಯುವುದಕ್ಕೆ ಏನಾದರೂ ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಾ ? ಸರ್ಕಾರ ಸಮಿತಿ ರಚನೆ ಮಾಡುವುದಾಗಲೀ, ತಾಲ್ಲೂಕು ಮಟ್ಟದಲ್ಲಿ ಯಾವುದಾದರೂ ರೀತಿಯಿಂದ ಈ ಭೂಮಿಯನ್ನು ಐಡೆಂಟಿಫೈ ಮಾಡುವುದಕ್ಕೆ ಸರ್ಕಾರದ ಬಳಿ ಯೋಜನೆ ಏನಾದರೂ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿಯ ಅವಶ್ಯಕತೆ ಇಲ್ಲ. ಸರ್‌ಪ್ಲಸ್ ಲ್ಯಾಂಡ್—ಲ್ಯಾಂಡ್ ರಿಫಾರ್ಮ್ಸ್ ಮಾಡತಕ್ಕಂಥಾದ್ದು. ಲಾಂಡ್‌ಟ್ರಿಬ್ಯೂನಲ್ ಕೆಲಸ. ಈಗ ಬಗರ್‌ಹುಕ್ಕುಂ ಮಾಡಿದ್ದನ್ನು ರಗ್ಯುಲರೈಸ್ ಮಾಡುವುದಕ್ಕೆ ಕಾನೂನು ಇದೆ. ಸರ್‌ಪ್ಲಸ್ ಲ್ಯಾಂಡ್ ಇರುವುದು ಲ್ಯಾಂಡ್ ರಿಫಾರ್ಮ್ಸ್‌ಕೆಳಗೆ ಲ್ಯಾಂಡ್ ರಿಫಾರ್ಮ್ಸ್‌ಕೆಳಗೆ ಸರ್‌ಪ್ಲಸ್ ಲ್ಯಾಂಡನ್ನು ಡಿಕ್ಲೇರ್ ಮಾಡಿದ್ದನ್ನು ಅವರು ಕೇಳಿದ್ದಾರೆ. ಅದನ್ನು ನಾನು ಹೇಳಿದ್ದೇನೆ.

SRI U. BHUPATHI.—It is only surplus land according to the Government.

ಶ್ರೀ ಎಸ್.ಆರ್. ಬೊಮ್ಮಾಯಿ.—ಸರ್‌ಪ್ಲಸ್ ಲ್ಯಾಂಡ್ ಅಂದರೆ ಲ್ಯಾಂಡ್. ರಿಫಾರ್ಮ್ಸ್‌ಕೆಳಗೆ ಟ್ರಿಬ್ಯೂನಲ್‌ನವರು ಏನು ಡಿಕ್ಲೇರ್ ಮಾಡುತ್ತಾರೆ ಅದು ಸರ್‌ಪ್ಲಸ್ ಲ್ಯಾಂಡ್. ಲ್ಯಾಂಡ್ ಟ್ರಿಬ್ಯೂನಲ್ ಪ್ರಕಾರ land available for the grant ಎನ್ನುವುದು ಬೇರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ

೨೭೧೪. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳೆಷ್ಟು ? ಈ ನಿಲಯಗಳಲ್ಲಿ ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು. ಪರಿಶಿಷ್ಟ ಜಾತಿ ಹಾಗೂ ಇತರರು (ಶೇಕಡ ತರಗತಿಯಿಂದ ೧೦ನೇ ತರಗತಿಯವರೆಗೆ)

ಆ) ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕೆ ಹೆಚ್ಚಿನ ಬೇಡಿಕೆ ಇರುವುದು ಸರ್ಕಾರದ ಗಮನದಲ್ಲಿ ಇದೆಯೇ, ಹೊಸದಾಗಿ ಪ್ರಾರಂಭಿಸಲಾಗಿರುವ ವಿದ್ಯಾರ್ಥಿನಿಲಯಗಳೆಷ್ಟು ?

ಇ) ನಿಲಯಗಳಲ್ಲಿ ಹಿಂದಿನ ನಿಗದಿತ ಸಂಖ್ಯೆಯನ್ನು ಬೇಡಿಕೆಗೆ ಅನುಕೂಲವಾಗಿ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ, ಹಾಗಿಲ್ಲದಿದ್ದಲ್ಲಿ, ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ತಲಾ ವಿದ್ಯಾರ್ಥಿಗೆ ನೀಡುತ್ತಿರುವ ಹಣವನ್ನು ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ ?

ಈ) ಪಿ.ಯು.ಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಿಲ್ಲವಿರುವುದು ಸರ್ಕಾರದ ಗಮನದಲ್ಲಿದೆಯೇ, ಇಲ್ಲವಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧) ನಿಲಯಗಳ ಸಂಖ್ಯೆ ೧೦೫೩

೨) ವಿದ್ಯಾರ್ಥಿಗಳ ಸಂಖ್ಯೆ ೬೩,೪೦೧. ಇವರಲ್ಲಿ ೫ನೇ ತರಗತಿಯಿಂದ ೧೦ನೇ ತರಗತಿಯವರೆಗೆ ೫೧,೩೬೪

೩) ಹೌದು. ೧೯೮೭–೮೮ನೇ ಸಾಲಿನಲ್ಲಿ ೫೫ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ.

ಇ) ಪ್ರಥಮಾದ್ಯತೆ ಇತರ ಸೌಕರ್ಯಗಳನ್ನು ಆಯಾಯಾ ಮಂಜೂರಾತಿ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ೧೯೮೭–೮೮ನೇ ಸಾಲಿನಲ್ಲಿ ೨೫೫೪ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಭೋಜನ ವೆಚ್ಚ ರೂ. ೧೨೦–೦೦ ಗಳಿಂದ ೧೫೦.೦೦ ಗಳಿಗೆ ಹೆಚ್ಚಿಸುವ ವಿಷಯ ಪರಿಶೀಲನೆಯಲ್ಲಿದೆ.